ಎಂಬ ಅಂಶವನ್ನು ತಂತ್ರಶಾಸ್ತ್ರದಲ್ಲಿ ಮೂವತ್ತಾರು ತತ್ತ್ವಗಳ ಮೂಲಕ ವಿವರಿಸಲಾಗಿದೆ. ಪರಮಶಿವ ಅಥವಾ ನಿಷ್ಕಲನು ಸಕಲನಾಗುವ ವಿಧಾನ ಇದು. ಈ ತತ್ತ್ವಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು: **ಅ.** ಮೊದಲನೆಯ ಗುಂಪಿನಲ್ಲಿ ಐದು ಶುದ್ಧತತ್ತ್ವಗಳಿವೆ. ಅವೆಂದರೆ **೧. ಶಿವ, ೨. ಶಕ್ತಿ, ೩. ನಾದ, ೪. ಬಿಂದು** ಮತ್ತು **೫. ಶುದ್ಧ-ವಿದ್ಯಾ. ಆ.** ಎರಡನೆಯ ಗುಂಪಿನಲ್ಲಿ ಏಳು ಶುದ್ಧಾಶುದ್ಧ ತತ್ತ್ವಗಳನ್ನು ಹೆಸರಿದ್ದಾರೆ. **ಇ.** ಮೂರನೆಯ ಗುಂಪಿನಲ್ಲಿ ಇಪ್ಪತ್ತನಾಲ್ಕು ಅಶುದ್ಧ ತತ್ತ್ವಗಳಿವೆ. ಇಲ್ಲಿ ನಾವು ಕೇವಲ ಶುದ್ಧ ತತ್ತ್ವಗಳ ವಿಚಾರವನ್ನು ಮಾತ್ರ ಮಾಡುತ್ತೇವೆ. ಈಗಾಗಲೇ ಶಿವ ಮತ್ತು ಶಕ್ತಿ ತತ್ತ್ವಗಳ ಬಗ್ಗೆ ವಿಸ್ತೃತವಾಗಿ ಚರ್ಚಿಸಿದ್ದೇವೆ. ಆದರೂ, ತತ್ತ್ವಗಳ ಜಿಜ್ಞಾಸೆಯ ಸಂದರ್ಭದಲ್ಲಿ ನಾವು ಅವುಗಳಿಗೆ ವಿಶಿಷ್ಟ ಅರ್ಥವನ್ನು ನೀಡಬಹುದು.

**೧. ಶಿವ:** ನಿರ್ವಿಕಾರವಾದ ಪರಮಶಿವ ತತ್ತ್ವದ ಪ್ರಥಮ ಸೃಷ್ಟಿ ಸ್ಪಂದನವನ್ನು ಇಲ್ಲಿ **'ಶಿವ'** ಎಂದು ಕರೆಯುತ್ತಾರೆ.

**೨. ಶಕ್ತಿ:** ಶಕ್ತಿತತ್ತ್ವವು ಈ ಶಿವತತ್ತ್ವದ, ಅದರಲ್ಲೇ ಅಂತರ್ಗತವಾದ ನಿಷೇಧ ತತ್ತ್ವ (*ನಿಷೇಧವ್ಯಾಪಾರರೂಪಾ ಶಕ್ತಿಃ*). ಇದರರ್ಥ, ಶಿವತತ್ತ್ವವು ನಿರ್ವಿಕಾರವಾದರೆ, ಶಕ್ತಿಯು ವಿಕಾರಕ್ಕೆ ಎಡೆಮಾಡಿಕೊಡುವ ಸೃಷ್ಟಿಕಾರ್ಯದ ಸ್ಪಂದನವನ್ನು ಉಂಟುಮಾಡುತ್ತದೆ. ಈ ಶಕ್ತಿತತ್ತ್ವವು ಕೂಡ ಪರಮಚೈತನ್ಯರೂಪವೇ ಆಗಿದೆ. ಆದರೆ ಅದು ತನ್ನಲ್ಲಿ, ವಿಷಯ-ವಿಷಯಿಗಳ ಭೇದವನ್ನು ಉಂಟುಮಾಡಿಕೊಳ್ಳುತ್ತದೆ. ಆ ಮೂಲಕ ಪ್ರಪಂಚದ ಸೃಷ್ಟಿಗೆ ಕಾರಣವಾಗುತ್ತದೆ.

**೩. ನಾದ :** ಸೃಷ್ಟಿಯ ಪ್ರಾಥಮಿಕ ಕ್ರಿಯಾಸ್ಥಿತಿಯಲ್ಲಿ ಶಕ್ತಿಗೆ **'ನಾದ'**ವೆಂಬ ಹೆಸರು ಬರುತ್ತದೆ. ನಾದವು ಶಕ್ತಿಗಿಂತ ಅಭಿನ್ನವಾದುದು. ಶಕ್ತಿಯು ತನ್ನ ಸುಪ್ತಾವಸ್ಥೆಯಿಂದ ಕ್ರಿಯಾವಸ್ಥೆಗೆ ಪರಿವರ್ತನೆಗೊಳ್ಳುವ ಮೊದಲನೆಯ ಹಂತದಲ್ಲಿ ಅದಕ್ಕೆ **'ನಾದ'**ವೆಂಬ ಹೆಸರು ಬಂದಿದೆ, ಅಷ್ಟೇ. ಈ ಕ್ರಿಯೆಯ ಅಂತಿಮ ಮತ್ತು ಪೂರ್ಣ ಘಟ್ಟವೇ ನಾವು ನೋಡುವ ಈ ಪ್ರಪಂಚ.

**೪. ಬಿಂದು:** ಇದು ಸೃಷ್ಟಿಕ್ರಿಯೆಯ ಎರಡನೆಯ ಹಂತದಲ್ಲಿ ಶಕ್ತಿಯು ಪಡೆದುಕೊಳ್ಳುವ ರೂಪ. ಇದು ಸೃಷ್ಟಿಕ್ರಿಯೆ ಆರಂಭಗೊಳ್ಳುವ ಹಂತವನ್ನು ಸಂಕೇತಿಸುತ್ತದೆ. ಮುಂದೆ ಬರುವ ಸೃಷ್ಟಿಯ ಅನಂತ ಸಾಧ್ಯತೆಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ಬಿಂದುವಿನಂತೆ ಇದನ್ನು ತಂತ್ರಶಾಸ್ತ್ರದಲ್ಲಿ ಭಾವಿಸುತ್ತಾರೆ. ಹಾಗಾಗಿ ಇದನ್ನು **ಮಹಾಬಿಂದು** ಎಂದೂ ಕರೆಯುತ್ತಾರೆ.

ಬೀಜವು ಮೊಳಕೆಯೊಡೆಯುವಾಗ ಉಬ್ಬುತ್ತದೆ. ಹಾಗೆಯೇ ಸೃಷ್ಟಿಕ್ರಿಯೆಗೆ ಮೂಲವಾದ ಶಕ್ತಿಯ ಈ ಉಬ್ಬುವ ಸ್ಥಿತಿಯನ್ನು **ನಾದ** ಮತ್ತು **ಬಿಂದು**ಗಳು ಸಂಕೇತಿಸುತ್ತವೆ **(ಉಚ್ಛೂನಾವಸ್ಥಾ)**.

**೫. ಶುದ್ಧ – ವಿದ್ಯಾ :** ಜಗತ್ತು ಮೂಡಿಬರುವ ಕ್ರಿಯೆಯಲ್ಲಿನ ಐದನೆಯ ತತ್ತ್ವ ಇದು. ಶಿವತತ್ತ್ವವು **'ನಾನು'** ಎಂಬುದನ್ನೂ, ಶಕ್ತಿತತ್ತ್ವವು **'ಇದು'** ಎಂಬುದನ್ನೂ ಸಂಕೇತಿಸುತ್ತದೆ ಎಂದು ಹಿಂದೆ ವಿವರಿಸಲಾಗಿದೆ. ಈ ಅಂಶಗಳು ಸ್ಫುಟಗೊಳ್ಳುವ ಕ್ರಿಯಾಪ್ರಧಾನ ತತ್ತ್ವ ಇದು. ಇಲ್ಲಿ **'ನಾನು'** ಮತ್ತು **'ಇದು'** – ಇವೆರಡೂ ಸಮಾನವಾಗಿ ಅಭಿವ್ಯಕ್ತಿಗೊಳ್ಳುತ್ತವೆ. ಅವುಗಳಲ್ಲಿನ ಭೇದವು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ.

ಶಕ್ತಿತತ್ತ್ವದ ಈ ಬಗೆಯ ಸಂಚಲನಕ್ರಿಯೆ ಮುಂದೆ ಏಳು ಶುದ್ಧಾಶುದ್ಧ ತತ್ತ್ವಗಳ ಮತ್ತು ಅನಂತರ ವಿಶ್ವಸೃಷ್ಟಿಯ ಮೂಲ ಘಟಕಗಳಾದ ಇಪ್ಪತ್ತನಾಲ್ಕು ಅಶುದ್ಧ ತತ್ತ್ವಗಳ ಹುಟ್ಟುವಿಕೆಗೆ ಕಾರಣವಾಗುತ್ತದೆ. ಈ ಎಲ್ಲ ಮೂವತ್ತಾರು ತತ್ತ್ವಗಳಲ್ಲಿಯೂ ಶಿವ-ಶಕ್ತಿ ಅಂಶವು ಅನ್ಯೋನ್ಯವಾಗಿ ಓತಪ್ರೋತವಾಗಿ ಹರಿದು ಬಂದಿದೆ. ಅದೇ ಮುಂದಿನ ಹಂತಗಳಲ್ಲಿ ಜಗತ್ತಿನಲ್ಲಿ ಕಾಣಬರುವ ಎಲ್ಲ ಚರಾಚರ ಜೀವರಾಶಿಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

**ಶಕ್ತಿಸ್ವರೂಪಿಣಿ ದೇವಿ:** ಪರಮತತ್ತ್ವದ ಶಕ್ತಿರೂಪವನ್ನು ವಿಶೇಷವಾಗಿ ಆರಾಧಿಸುವವರು ಶಾಕ್ತರು. ಅವರು ಈ ಶಕ್ತಿಯನ್ನು **'ದೇವಿ'** ಎಂದು ಪೂಜಿಸುತ್ತಾರೆ. ಅಂದರೆ ಪರಮತತ್ತ್ವದ ಶಕ್ತಿಯ ಅಂಶವನ್ನು ಸ್ತ್ರೀರೂಪವೆಂದು ಭಾವಿಸುತ್ತಾರೆ. ಇದಕ್ಕೆ ಕಾರಣ ಸ್ಪಷ್ಟ. ಎಲ್ಲ ಜೀವರಾಶಿಗಳಲ್ಲಿ ಸ್ತ್ರೀರೂಪಕ್ಕೇ ಸೃಷ್ಟಿಕ್ರಿಯೆಯು ನಿಸರ್ಗದತ್ತವಾಗಿ ಒಲಿದುಬಂದಿದೆ. ಪ್ರತಿಯೊಬ್ಬ ಮಾನವನೂ ತಾಯಿಯ ಗರ್ಭದಿಂದಲೇ ಹುಟ್ಟುತ್ತಾನೆ. ಕೇವಲ ಹೆಣ್ಣು ಮಾತ್ರವೇ ಮಾನವಸೃಷ್ಟಿಯ ಸಾಧ್ಯತೆಯ ಸಾಮರ್ಥ್ಯವನ್ನು ತನ್ನಲ್ಲಿ ಹೊಂದಿರುತ್ತಾಳೆ. ಇದು ದೈವೀನಿಯಮ. ಇದನ್ನೇ ನಾವು ಇಡೀ ವಿಶ್ವದ ಸೃಷ್ಟಿಕಾರ್ಯಕ್ಕೂ ಅನ್ವಯಿಸಿಕೊಳ್ಳಬೇಕು. ಆಗ ಶಕ್ತಿಯು ಇಡೀ ಬ್ರಹ್ಮಾಂಡವನ್ನೇ ತನ್ನ ಗರ್ಭದಲ್ಲಿಟ್ಟುಕೊಂಡು, ಈ ಸೃಷ್ಟಿಕಾರ್ಯದ ಜನನಿಯಾಗಿದ್ದಾಳೆ ಎನ್ನುವ ಉದಾತ್ತ ಭಾವನೆ ಮೂಡುತ್ತದೆ. ತಂತ್ರಶಾಸ್ತ್ರದ **'ಶಕ್ತಿ'** ತತ್ತ್ವವು ಭಕ್ತನ ಈ ಭಾವನೆಯಲ್ಲಿ **'ಜಗನ್ಮಾತೆ'**ಯಾಗಿ ಹೊರಹೊಮ್ಮುತ್ತಾಳೆ. ಹೀಗೆ ಶಕ್ತಿಯನ್ನು ದೇವಿಯಾಗಿ ಪೂಜಿಸುವ ಪರಿಪಾಠವು ನಮ್ಮಲ್ಲಿ ಬೆಳೆದುಬಂದಿದೆ.

ಪರಬ್ರಹ್ಮವು ಸಗುಣಭಾವದಲ್ಲಿ ನೂರಾರು ರೂಪಗಳನ್ನು ಮತ್ತು ನಾಮಗಳನ್ನು ಪಡೆದುಕೊಂಡು, ಭಕ್ತನ ಪೂಜೆಗೆ ಮತ್ತು ಆರಾಧನೆಗೆ ವಸ್ತುವಾಗುತ್ತದೆ. ಉದಾ: **ವಿಷ್ಣು, ಶಿವ, ರಾಮ, ಕೃಷ್ಣ** ಇತ್ಯಾದಿ. ಇದೇ ರೀತಿ, ಅದೇ ತತ್ತ್ವದ ಶಕ್ತಿರೂಪವು ನೂರಾರು ರೂಪಗಳ ಮತ್ತು ನಾಮಗಳ ಮೂಲಕ ಪೂಜಿಸಲ್ಪಡುತ್ತದೆ. **ಲಲಿತಾ, ದುರ್ಗಾ, ಶಿವೆ, ಕಾಳಿ** ಮುಂತಾದ ನೂರಾರು ಹೆಸರುಗಳನ್ನು ಮತ್ತು ರೂಪಗಳನ್ನು ಪಡೆದುಕೊಂಡ ಏಕಮೇವ ಜಗನ್ಮಾತೆಯು ಈ ಶಕ್ತಿರೂಪಿಣಿಯೇ ಆಗಿದ್ದಾಳೆ. ಅವಳನ್ನೇ ವಿಶೇಷವಾಗಿ ನವರಾತ್ರಿಯ ಪರ್ವಕಾಲದಲ್ಲಿ ಆರಾಧಿಸುತ್ತೇವೆ.

ತಂತ್ರಶಾಸ್ತ್ರದ ಹಿನ್ನೆಲೆಯಲ್ಲಿ ಶಿವ-ಶಕ್ತಿ ತತ್ತ್ವದ ವಿಚಾರವನ್ನು ತಿಳಿದುಕೊಳ್ಳಲು ಇಲ್ಲಿ ಪ್ರಯತ್ನಿಸಿದೆ. ಇದು ಗಹನ ವಿಚಾರವಾದರೂ, ಆಧುನಿಕ ಯುಗದಲ್ಲಿ ದಿವ್ಯತ್ರಯರಾದ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು ತಂತ್ರಶಾಸ್ತ್ರದ ಕಠಿಣ ಸಿದ್ಧಾಂತವನ್ನು, ಸಾಮಾನ್ಯರೂ ಅರ್ಥಮಾಡಿಕೊಳ್ಳುವಂತೆ ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಈ ವಿಷಯವನ್ನು ನಾವು ಮುಂದಿನ ತಿಂಗಳಿನ ಸಂಚಿಕೆಯಲ್ಲಿ ಅಧ್ಯಯನ ಮಾಡೋಣ.

**ಆಧಾರ ಗ್ರಂಥಗಳು:** ೧. The Garland of Letters by *Sir John Woodroffe* ೨. The Shakti and Shiva by *Sir John Woodroffe.* ೩. ಯುಗಯಾತ್ರೀ ಭಾರತೀಯ ಸಂಸ್ಕೃತಿ – ಮೂರನೆಯ ಸಂಪುಟ ೪. Lalitha Sahasranama Tr. *by Swami Tapasyananda* - Introduction by *Sri D.S. Sharma*.

⌘